O.S.No.:218/20

P.W.:1

ಈ ದಿನ ದಿಃ 07-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ ಜೆ ಜಿ ವಕೀಲರಿಂದಃ

ನಾನು 10 ನೇ ತರಗತಿ ತನಕ ಓದಿರುತ್ತೇನೆ. 1 ನೇ ವಾದಿ 10 ನೇ ತರಗತಿ ತನಕ ಓದಿರುತ್ತಾನೆ. ನಮ್ಮ ತಂದೆ ತೀರಿಕೊಂಡು 40-50 ವರ್ಷ ಆಗಿದೆ. ನಮ್ಮ ತಂದೆ ತೀರಿಕೊಂಡಾಗ ನಾನು 4 ವರ್ಷದವನು ಇದ್ದು ನಮ್ಮ ಅಣ್ಣ 6 ವರ್ಷದವನು ಇದ್ದನು. ನಮ್ಮ ತಂದೆಗೆ ನಾವು 5 ಜನ ಮಕ್ಕಳು ಅವರೆಂದರೆ ರಾಜಾರಾಮ, ಸಕಾರಾಮ, ವಿಠ್ಠಲ, ಪಾಂಡುರಂಗ ಹಾಗೂ ನಾನು ಇರುತ್ತೇವೆ . ರಾಜಾರಾಮ ರವರು ನನಗಿಂತ 15 ವರ್ಷ ದೊಡ್ಡವನಾಗಿರುತ್ತಾನೆ. ರಾಜಾರಾಮ ಹಾಗೂ ಸಕಾರಾಮ ಈಗ ತೀರಿಕೊಂಡಿದ್ದು, ರಾಜಾರಾಮ ಇತನ ಹೆಂಡತಿ ತೀರಿಕೊಂಡಿದ್ದು ಅವರ ಮಕ್ಕಳು ಶಿರೋಳದಲ್ಲಿ ಇರುತ್ತಾರೆ . ಸಕಾರಾಮ ಇತನ ಹೆಂಡತಿ ತೀರಿಕೊಂಡಿದ್ದು ಅವನ ಮಕ್ಕಳು ಹಾರೋಗೇರಿಯಲ್ಲಿ ಇರುತ್ತಾರೆ. ನಮ್ಮ ಸಹೋದರ ಪಾಂಡುರಂಗ ನಾಸೀಕ್ ದಲ್ಲಿ ಇರುತ್ತಾರೆ.

ರಾಜಾರಾಮ ಹಾಗೂ ಅವನ ಹೆಂಡತಿ ಶಿರೋಳದಲ್ಲಿ ತೀರಿಕೊಂಡಿರುತ್ತಾರೆ . ರಾಜಾರಾಮ ಎಕ್ಸಂಬಾ ಬಿಟ್ಟು ಹೋಗಿ ಮೀಲಿಟರಿಯಲ್ಲಿ ಕೆಲಕ್ಕೆ ಹೋಗಿ ನಂತರ ವಾಪಸ್ಸ ಬಂದು ಶಿರೋಳದಲ್ಲಿ ಖಾಯಂ ಆಗಿ ವಾಸವಾಗಿರುತ್ತಾರೆ. ಸಕಾರಾಮ ಹಾಗೂ ಅವನ ಹೆಂಡತಿ ಹಾರೋಗೇರಿಯಲ್ಲಿ ತೀರಿಕೊಂಡಿರುತ್ತಾರೆ. ಸಕಾರಾಮ ಅವರು ಹಾರೋಗೇರಿಗೆ ಹೋಗಿ 5-6 ವರ್ಷ ಅಗಿದ್ದು, ಅದಕ್ಕಿಂತ ಮೊದಲು ಸಕಾರಾಮ ಎಕ್ಸಂಬಾದಲ್ಲಿ ಇರುತ್ತಿದ್ದರು. ಸಕಾರಾಮನ ಹೆಂಡತಿ ಮಕ್ಕಳು ಹಾರೋಗೇರಿಯಲ್ಲಿ ಇರುವುದರಿಂದ ಅವನ ಆರೈಕೆ ಮಾಡಲು ಯಾರು ಇಲ್ಲದ್ದರಿಂದ ಅವನು ಹೆಂಡತಿ ಮಕ್ಕಳ ಹತ್ತಿರ ಹೋಗಿರುತ್ತಾನೆ . ಹೋರೋಗೇರಿ ಸಕಾರಾಮ ಇತನ ಹೆಂಡತಿ ಮಕ್ಕಳು ಹೋಗಿ 30 ವರ್ಷಗಳ ಹಿಂದೆ ಹೋಗಿರುತ್ತಾರೆ. ಪಾಂಡುರಂಗ ನಾಸೀಕ್ ದಲ್ಲಿ 20-25 ವರ್ಷಗಳಿಂದ ವಾಸವಾಗಿದ್ದಾರೆ. ಪಾಂಡುರಂಗ ಇತನ ಮಕ್ಕಳ ಜನನ ಹಾಗೂ ಶಿಕ್ಷಣವು ನಾಸೀಕ್ ದಲ್ಲಿ ಆಗಿದೆ ಎಂದರೆ ಸಾಕ್ಷಿ ಸೌಂದತ್ತಿಯಲ್ಲಿ ಆಗಿದೆ ಎಂದು ಉತ್ತರಿಸುತ್ತಾರೆ . ಸಕಾರಾಮನ ಮಕ್ಕಳು ಎಕ್ಸಂಬಾರದಲ್ಲಿ ಹುಟ್ಟಿದ್ದು ನಂತರ ಹಾರೋಗೇರಿಗೆ ಹೋಗಿರುತ್ತಾರೆ. ರಾಜಾರಾಮನ ಮಕ್ಕಳು ಅವನು ಮೀಲಿಟರಿಗೆ ಹೋದಾಗ ಶಿರೋಳಕ್ಕೆ ಹೋಗಿರುತ್ತಾರೆ ಎಂದರೆ ಸರಿ. ಅವರ ಶಿಕ್ಷಣ ಹೊರಗೆ ಆಗಿದೆ ಎಂದರೆ ಸರಿ.

ದಾವಾ ಆಸ್ತಿಗೆ ರಾಜಾರಾಮ , ಸಕಾರಾಮ ಹಾಗೂ ಪಾಂಡುರಂಗನ ಮಕ್ಕಳ ಸಂಬಂಧ ಇದೆ. ದಾವಾ ಆಸ್ತಿಯನ್ನು ರಾಜಾರಾಮ, ಪಾಂಡುರಂಗ ಹಾಗೂ ಸಕಾರಾಮ ಮಕ್ಕಳು ಸಾಗುವಳಿ ಮಾಡುವುದಿಲ್ಲ , ನಾವೇ ಮಾಡುತ್ತೇವೆ.

ನಮ್ಮ ತಂದೆಯ ಮೂಲ ಊರು ಎಕ್ಸಂಬಾ ಇರುತ್ತದೆ. ಎಕ್ಸಂಬಾದಲ್ಲಿ ದಾವಾ ಆಸ್ತಿ ಬಿಟ್ಟು ನಮಗೆ ಬೇರೆ ಆಸ್ತಿಗಳು ಇವೆ. ಸರ್ವೇ ನಂ.493/2 ರಲ್ಲಿ 4 ಎಕರೆ 10 ಗುಂಟೆ, 493/1 ಬಿ ರಲ್ಲಿ 20 ಗುಂಟೆ ಜಮೀನು ನಮ್ಮ ಆಸ್ತಿ ಎಂದರೆ ಸರಿ. ಸದರಿ ಆಸ್ತಿಗಳು ನಮ್ಮ ಹಿರಿಯರಿಂದ ಬಂದಿರುತ್ತೇವೆ. ಸದರಿ ಜಮೀನುಗಳನ್ನು ನಾನು ಹಾಗೂ 1 ನೇ ವಾದಿ ಸಾಗುವಳಿ ಮಾಡುತ್ತೇವೆ. ಸದರಿ ಜಮೀನಿನಲ್ಲಿ ಕಬ್ಬು, ಶೇಂಗಾ ಹಾಗೂ ಇತರೆ ಬೆಳೆಗಳು ಬೆಳೆಯುತ್ತೇವೆ. ನಾವು ಕಬ್ಬನ್ನು ಉಪ್ಪರ್ಗಿ ಫ್ಯಾಕ್ಟರಿಗೆ ಕಳುಹಿಸುತ್ತೇವೆ . ಮೇಲೆ ಹೇಳಿದ ಎರಡು ಜಮೀನುಗಳಿಗೆ ದೂದ್‌ಗಂಗಾ ನದಿಯಿಂದ ಪೈಪ್ ಲೈನ್ ನ್ನು 20 ವರ್ಷದ ಹಿಂದೆ ಮಾಡಿರುತ್ತೇವೆ.

ದತ್ತಾತ್ರೇಯ ಗಣೇಶ ಮುತಾಲಿಕ್ ರವರನ್ನು ನಾನು ನೋಡಿಲ್ಲ. ಅವರು ಸುಮಾರು 50 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ದತ್ತಾತ್ರೇಯ ಗಣೇಶ ಮುತಾಲಿಕ್ ರವರಿಗೆ ಒಬ್ಬ ಮಗ ಇದ್ದನು . ಅವನು ತೀರಿಕೊಂಡಿರುತ್ತಾನೆ. ಈಗ ದತ್ತಾತ್ರೇಯ ಗಣೇಶ ಮುತಾಲಿಕ್ ರವರ ಮೊಮ್ಮಗ ಇರುತ್ತಾನೆ. ದತ್ತಾತ್ರೇಯ ಗಣೇಶ ಮುತಾಲಿಕ್ ರವರ ಮಗನ ಹೆಸರು ಶರದ್ ಇರುತ್ತದೆ. ಶರದ್ ನ ಮಗನ ಹೆಸರು ಗೊತ್ತಿಲ್ಲ. ದತ್ತಾತ್ರೇಯ ಗಣೇಶ ಮುತಾಲಿಕ್ ರವರ ಮೂಲ ಊರು ಎಕ್ಸಂಬಾ ಎಂದರೆ ಸರಿ . ಎಕ್ಸಂಬಾದಲ್ಲಿ ದತ್ತಾತ್ರೇಯ ಗಣೇಶ ಮುತಾಲಿಕ್ ರವರಿಗೆ ಸೇರಿದ ಜಮೀನುಗಳು ಇವೆ ಎಂದರೆ ಸರಿ . ದತ್ತಾತ್ರೇಯ ಗಣೇಶ ಮುತಾಲಿಕ್ ರವರು ಪೂಣಾದಲ್ಲಿ ನ್ಯಾಯಾಧೀಶರಾಗಿದ್ದರು. ದತ್ತಾತ್ರೇಯ ಗಣೇಶ ಮುತಾಲಿಕ್ ರವರಿಗೆ ವಿಶ್ವಾಸ ಅಂತಾ ತಮ್ಮ ಇದ್ದಾ ಎಂದರೆ ಸರಿ. ಅವನು 2015 ರಲ್ಲಿ ತೀರಿಕೊಂಡಿದ್ದಾನೆ ಎಂದರೆ ಸರಿ . ಸದರಿ ವಿಶ್ವಾಸನಿಗೆ ವೈಜಯಂತಿ ಅಂತಾ ಹೆಂಡತಿ ಹಾಗೂ ಮಂಜಶ್ರೀ ಹಾಗೂ ಧನಶ್ರೀ ಅಂತಾ ಮಕ್ಕಳು ಎಂದರೆ ಸರಿ . ವಿಶ್ವಾಸನ ಮಗ ಪ್ರಸಾದ ಅಪಘಾತದಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಸರಿ. ದತ್ತಾತ್ರೇಯ ಗಣೇಶ ಮುತಾಲಿಕ್ ಹಾಗೂ ವಿಶ್ವಾಸ ರವರು ಒಂದೇ ತಂದೆ ತಾಯಿಯ ಮಕ್ಕಳು ಎಂದರೆ ಸರಿ. ದತ್ತಾತ್ರೇಯ ಗಣೇಶ ಮುತಾಲಿಕ್ ಹಾಗೂ ವಿಶ್ವಾಸ ರವರು ತಂದೆಯ ಹೆಸರು ಗಣೇಶ ಎಂದರೆ ಸರಿ. ಸದರಿ ಗಣೇಶ ರವರಿಗೆ ಎಕ್ಸಂಬಾದಲ್ಲಿ ಮನೆ ಹಾಗೂ ಹೊಲ ಇದೆ ಎಂದರೆ ಸರಿ.

ದಾವಾ ಆಸ್ತಿ ಮೊದಲಿಗೆ ದತ್ತಾತ್ರೇಯ ಗಣೇಶ ಮುತಾಲಿಕ್ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ . ವಿಶ್ವಾಸನ ಹೆಸರಿನಲ್ಲಿ 3 ಎಕರೆ 30 ಗುಂಟೆ ಜಮೀನು ಇತ್ತು ಎಂದರೆ ಸರಿ . ಎಕ್ಸಂಬಾದಲ್ಲಿ ಒಂದು ಮನೆ ಇದ್ದು ಅದು ದತ್ತಾತ್ರೇಯ ಗಣೇಶ ಮುತಾಲಿಕ್ ರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ . ದತ್ತಾತ್ರೇಯ ಗಣೇಶ ಮುತಾಲಿಕ್ ರವರು ಪೂಣಾಕ್ಕೆ ಹೋದ ನಂತರ ಮನೆಯಲ್ಲಿ ವಿಶ್ವಾಸ ಹಾಗೂ ಅವನ ಹೆಂಡತಿ ಮಕ್ಕಳು ಇರುತ್ತಿದ್ದರು ಎಂದರೆ ಸರಿ . ದತ್ತಾತ್ರೇಯ ಗಣೇಶ ಮುತಾಲಿಕ್ ರವರು ಪೂಣಾಕ್ಕೆ ಹೋದ ನಂತರ ಅವನ ಮನೆತನದ ಎಲ್ಲ ಭೂಮಿ ಮತ್ತು ಮನೆಗಳನ್ನು ವಿಶ್ವಾಸ

ನೋಡಿಕೊಳ್ಳುತ್ತಿದ್ದ ಎಂದರೆ ಸರಿ. ದತ್ತಾತ್ರೇಯ ಗಣೇಶ ಮುತಾಲಿಕ್ ರವರ ಮನೆ ದತ್ತಾತ್ರೇಯ ಗುಡಿ ಹತ್ತಿರ ಇದೆ ಎಂದರೆ ಸರಿ.

ದತ್ತಾತ್ರೇಯ ಗಣೇಶ ಮುತಾಲಿಕ್ ರವರು ಯಾವಾಗ ಎಕ್ಸಂಬಾ ಬಿಟ್ಟು ಹೋದರು ಎಂದು ನನಗೆ ಗೊತ್ತಿಲ್ಲ. ದತ್ತಾತ್ರೇಯ ಗಣೇಶ ಮುತಾಲಿಕ್ ರವರು ನೌಕರಿ ಸಂಬಂಧ ಎಕ್ಸಂಬಾ ಬಿಟ್ಟು ಹೋದರು ಎಂದರೆ ಸರಿ. ದತ್ತಾತ್ರೇಯ ಗಣೇಶ ಮುತಾಲಿಕ್ ಹಾಗೂ ಅವರ ಕುಟುಂಬದವರು ಎಕ್ಸಂಬಾಕ್ಕೆ ಹಬ್ಬಹರಿದಿನಗಳಲ್ಲಿ ಬರುತ್ತಿದ್ದರು ಎಂದರೆ ಸರಿ. ದತ್ತಾತ್ರೇಯ ಗಣೇಶ ಮುತಾಲಿಕ್ ಹಾಗೂ ವಿಶ್ವಾಸ ರ ಹೆಂಡತಿ ಮಕ್ಕಳು ಸಂಬಂಧ ಚನ್ನಾಗಿ ಇತ್ತು ಎಂದರೆ ಸರಿ. ದತ್ತಾತ್ರೇಯ ಗಣೇಶ ಮುತಾಲಿಕ್ ರವರ ತಂದೆಯ ಹೆಸರು ಗಣೇಶ ದತ್ತಾತ್ರೇಯ ಮುತಾಲಿಕ್ . ನಾನು ಗಣೇಶನನ್ನು ನೋಡಿಲ್ಲ ಹಾಗೂ ಅವರು ಯಾವಾಗ ತೀರಿಕೊಂಡಿದ್ದಾರೆ ಎಂದು ಗೊತ್ತಿಲ್ಲ . ಗಣೇಶ ದತ್ತಾತ್ರೇಯ ಮುತಾಲಿಕ್ ರವರು ಶೇತ್ಕಿ ಮಾಡುತ್ತಿದ್ದರು ಎಂದರೆ ಸರಿ . ಗಣೇಶ ದತ್ತಾತ್ರೇಯ ಮುತಾಲಿಕ್ ರವರು ಎಕ್ಸಂಬಾದಲ್ಲಿ ತೀರಿಕೊಂಡರು ಎಂದರೆ ಸರಿ.

ನಮ್ಮ ತಂದೆ ಶೇತ್ಕಿ ಮಾಡುತ್ತಿದ್ದರು. ನಮ್ಮ ತಂದೆ ಹಾಗೂ ದತ್ತಾತ್ರೇಯ ಗಣೇಶ ಮುತಾಲಿಕ್ ರವರು ತಮ್ಮ ನಡುವೆ ಹಣಕಾಸಿನ ವ್ಯವಹಾರ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ . ನಮ್ಮ ತಂದೆ ಹಾಗೂ ಗಣೇಶ ದತ್ತಾತ್ರೇಯ ಮುತಾಲಿಕ್ ರವರು ಹಣಕಾಸಿನ ವ್ಯವಹಾರ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ . ನಮ್ಮ ತಂದೆಗೂ ದತ್ತಾತ್ರೇಯ ಗಣೇಶ ಮುತಾಲಿಕ್ ರವರ ಪರಿಚಯವಿತ್ತು. ನಮ್ಮ ತಂದೆ ಹಾಗೂ ಗಣೇಶ ಮುತಾಲಿಕ್ ರವರ ಪರಿಚಯ ಇರಬಹುದು. ಅದರ ಬಗ್ಗೆ ನನಗೆ ವೈಯಕ್ತಿ ಮಾಹಿತಿ ಇಲ್ಲ . ನಮ್ಮ ತಂದೆ ಹಾಗೂ ದತ್ತಾತ್ರೇಯ ರವರ ತಂದೆ ಗಣೇಶ ರವರ ನಡುವೆ ಏನು ವ್ಯವಹಾರ ಇತ್ತು ಎಂದು ನನಗೆ ಮಾಹಿತಿ ಇಲ್ಲ . ಅದೇ ರೀತಿ ನಮ್ಮ ತಂದೆ ಹಾಗೂ ದತ್ತಾತ್ರೇಯ ರವರ ನಡುವೆ ಏನು ವ್ಯವಹಾರ ಇತ್ತು ಎಂದು ನನಗೆ ಮಾಹಿತಿ ಇಲ್ಲ. ಅವರ ಮತ್ತು ನಮ್ಮ ತಂದೆಯ ನಡುವೆ ಸಂಬಂಧ ಚೆನ್ನಾಗಿತ್ತು.

ದಾವೆಯು ಸರ್ವೆ ನಂ. 24 ಕ್ಕೆ ದಾಖಲಿಸಿರುತ್ತೇವೆ. ದಾವಾ ಆಸ್ತಿಯ ಚೆಕ್ ಬಂದಿ ಗೊತ್ತು. ಪೂರ್ವಕ್ಕೆ ರಸ್ತೆ ಎಂದರೆ ಸರಿ ಹಾಗೂ ರಸ್ತೆಯ ನಂತರ ವಿಜಯ ಮಾನಿಕ್‌ಚಂದ ಶಾಹ ರವರ ಜಮೀನು ಇದೆ ಎಂದರೆ ಸರಿಯಲ್ಲ,

ದಕ್ಷಿಣಕ್ಕೆ ಎಕ್ಸಂಬಾ ಕಲ್ಲೋಳ ರಸ್ತೆ ಇದೆ ಎಂದರೆ ಸರಿ , ಪಶ್ಚಿಮಕ್ಕೆ ಅಣ್ಣಾಸಾಹೇಬ ಚನ್ನಬಸಪ್ಪ ಹುಕ್ಕೇರಿ ರವರ ಜಮೀನು ಇದೆ ಎಂದರೆ ಸರಿ , ಉತ್ತರಕ್ಕೆ ವಿಜಯ ಮಾನಿಕ್‌ಚಂದ ಶಾಹ ರವರ ಜಮೀನು ಇದೆ ಎಂದರೆ ಸರಿ . ದಾವಾ ಆಸ್ತಿ ದತ್ತಾತ್ರೇಯ ಗಣೇಶ ಮುತಾಲಿಕ್ ರವರು ತೀರಿಕೊಳ್ಳುವ ತನಕ ಅವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಅವರು ತೀರಿಕೊಂಡ ನಂತರ ಅವರ ಮಗ ಶರದ್ ನ ಹೆಸರಿನಲ್ಲಿ ದಾಖಲಾಗಿದೆ ಎಂದರೆ ಸರಿ. ದಾವಾ ಆಸ್ತಿಗೆ ನಮ್ಮ ತಂದೆಯ ಹೆಸರು ದಾಖಲು ಆಗಿರುವುದಿಲ್ಲ. ದಾವಾ ಆಸ್ತಿಯ ಯಾವತ್ತು ನಮ್ಮ ತಂದೆಯ ಹೆಸರು

ದಾಖಲಾಗಿಲ್ಲ, ನಮ್ಮ ತಂದೆ ಮಾಲಿಕ ವ. ರೈತ ಅಲ್ಲ ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಗೆ ನಮ್ಮ 5 ಜನ ಸಹೋದರರ ಹೆಸರು ಯಾವತ್ತು ಮಾಲಿಕ ವ. ರೈತ ಅಂತಾ ನಮೂದು ಆಗಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ನಮಗೆ ಯಾವುದೇ ಸಂಬಂಧ ಇಲ್ಲದರಿಂದ ನಮ್ಮ ಹೆಸರು ದಾಖಲಾಗಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆ ಕಾಲದಿಂದಲೂ ಸಹ ನಾವೇ ಸಾಗುವಳಿ ಮಾಡುತ್ತಿದ್ದೇವೆ ಎಂದು ಉತ್ತರಿಸುತ್ತಾರೆ. ನಮ್ಮ ತಂದೆ 55 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ನಮ್ಮ ತಂದೆಗೆ ದಾವಾ ಜಮೀನನ್ನು ಸಾಗುವಳಿ ಮಾಡಲು ಗಣೇಶ ಕೊಟ್ಟಿರುತ್ತಾನೆ. ಆ ಬಗ್ಗೆ ನಾವು ನ್ಯಾಯಾಲಯದಲ್ಲಿ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಹಾಗೂ ನಮ್ಮ ತಂದೆ ಸಾಗುವಳಿ ಮಾಡುತ್ತಿದ್ದಾರೆ ಅಂತಾ ತೋರಿಸಲು ಪಾಳೆ ಪಟ್ಟ ಹಾಗೂ ಪಾವತಿ ರಶೀದಿ ಪಟ್ಟ ಇರುತ್ತದೆ.

ಗಣೇಶ ಮುತಾಲಿಕ್ ರವರು ನಮ್ಮ ತಂದೆಗೆ ಜಮೀನನ್ನು ಕಾಗದ ಬರೆದುಕೊಟ್ಟು ಕೊಟ್ಟಿರುವುದಿಲ್ಲ. ನನ್ನ ದಾವೆಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ 1952 ರಲ್ಲಿ ಗಣೇಶರವರು ನಮ್ಮ ತಂದೆಗೆ ಜಮೀನನ್ನು ಕೊಟ್ಟಿರುತ್ತಾರೆ ಅಂತಾ ಬರೆಯಿಸಿರುತ್ತೇನೆ . ನಮ್ಮ ದಾವೆಯಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ದಾವಾ ಜಮೀನನ್ನು ದತ್ತಾತ್ರೇಯವರು ಕೊಟ್ಟಿರುತ್ತಾರೆ ಅಂತಾ ಬರೆಯಿಸಿರುವುದಿಲ್ಲ . ದಾವಾ ಆಸ್ತಿಯ ಮೊದಲನೇ ಮಾಲಿಕ್ ದತ್ತಾತ್ರೇಯ ಅವರ ನಂತರ ಶರದ್ ಎಂದರೆ ಸರಿ. ಶರದ್ ದಾವಾ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿದ್ದಾರನೆ ಎಂದರೆ ಸರಿ. ನಮ್ಮ ತಂದೆಗೆ 1952 ರಲ್ಲಿ ಜಮೀನು ಕೊಟ್ಟ ಬಗ್ಗೆ ಯಾವುದೇ ಉತಾರ ಹಾಗೂ ಡೈರಿ ಆಗಿರುವುದಿಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ , ನೀಡಿ ಮುಂದೂಡಲಾಯಿತು.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಿ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ.